ಶಿಕ್ಷಣದಿಂದ ಶ್ರೇಷ್ಠತೆ

# ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು– 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವಕಾಲೇಜು

---

ದಿನಾಂಕ 26.01.2020

## <u>ಪ್ರಕಟಣೆಯ ಕೃಪೆಗಾಗಿ</u>

*ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ*

# "ದೇಶದ ಸಂವಿಧಾನಾತ್ಮಕ 71ನೇ ಗಣರಾಜ್ಯೋತ್ಸವ ಆಚರಣೆ"



ಮೈಸೂರು, ಜನವರಿ, 26 : ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದೇಶದ ಸಂವಿಧಾ ನಾತ್ಮಕ'71ನೇ ಗಣರಾಜ್ಯೋತ್ಸವ' ವನ್ನು ಆಚರಿಸಲಾಯಿತು. ಎಸ್.ಬಿ.ಆರ್.ಆರ್. ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಭಾಗವತ್ ಅವರ ಅಧ್ಯಕ್ಷತೆಯಲ್ಲಿ, ಮುಖ್ಯ ಅತಿಥಿಗಳಾದ ನಿವೃತ್ತ ಐಪಿಎಸ್ ಅಧಿಕಾರಿಗಳಾದ ಶ್ರೀ ಕೆ. ಎಸ್. ಸುರೇಶ್ ಬಾಬುರವರು ದೇಶದ ಐತಿಹಾಸಿಕ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ಧ್ವಜಾರೋಹಣವನ್ನು ನೆರವೇರಿಸಿದರು.



ಮುಖ್ಯ ಅತಿಥಿಗಳು ವಿದ್ಯಾರ್ಥಿನಿ ಯರನ್ನು ಉದ್ದೇಶಿಸಿ ಮಾತನಾಡುತ್ತಾ, ದೇಶದ ಪ್ರತಿಯೊಬ್ಬ ಪ್ರಜೆಯೂ ಗಣರಾಜ್ಯೋತ್ಸವ ದಿನದ ಮಹತ್ವವನ್ನು ಮತ್ತು ನಮ್ಮ ಸಂವಿಧಾನವನ್ನು ತಿಳಿದುಕೊಳ್ಳಬೇಕು. ಇಂದು ಭಾರತದ ಇತಿಹಾಸದಲ್ಲಿ ಮರೆಯಲಾಗದ ಸುಧಿನ. ಭಾರತ ಆರ್ಥಿಕವಾಗಿ, ಸಾಮಾಜಿಕವಾಗಿ,

ಶೈಕ್ಷಣಿಕವಾಗಿ ಹೇಗಿರಬೇಕು, ಪ್ರತಿಯೊಬ್ಬರಿಗೂ ಸಮಾನತೆ ಹಾಗೂ ಸ್ವಾತಂತ್ರ್ಯದ ಹಕ್ಕನ್ನು ಸಂವಿಧಾನದ ಚೌಕಟ್ಟಿನಲ್ಲಿ ಮಂಡಿಸಿದ ಮಹಾನುಭಾವ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ನೆನೆಯುವ ದಿನ ಎಂದರು.



ಮುಂದುವರಿದು, ನಮ್ಮ




ರಾಷ್ಟ್ರಧ್ವಜದಲ್ಲಿ ಅಶೋಕ ಚಕ್ರವನ್ನು ಕಾಣುತ್ತೇವೆ. ಅಶೋಕ ಎಂದರೆ ಶೋಕವಿಲ್ಲದ್ದು, ಎಂಧರ್ಥ. ಇದರಲ್ಲಿ 'ಸತ್ಯಮೇವ ಜಯತೇ' ಎಂದು ಬರೆದಿದೆ. ನಮ್ಮ ದೇಶ ಸತ್ಯಕ್ಕೆ ಬೆಲೆಕೊಡುವಂತದ್ದು, ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಂಡು ಬಂದಿರುವ ರಾಷ್ಟ್ರ ನಮ್ಮದು. ಆದರೆ, ಇಂದು ನಾವು 70 ವರ್ಷ ಕಳೆದರೂ ಸಹ ಮೌಢ್ಯತೆ, ಮೂಢನಂಬಿಕೆಗಳನ್ನು ಹುಟ್ಟು ಹಾಕಿ ವಿಜೃಂಭಿಸುತ್ತಿದ್ದೇವೆ. ಕೆಲವು ರಾಜಕೀಯ ವ್ಯಕ್ತಿಗಳಿಗೆ ಇಂದಿನ ಸಮಾರಂಭದ ವೈಶಿಷ್ಟ್ಯತೆಯೇ ಗೊತ್ತಿಲ್ಲ. ಸಂವಿಧಾನದ ರಚನೆ, ಮೂಲಭೂತ ಹಕ್ಕು ಮತ್ತು ಕರ್ತವ್ಯ ಹಾಗೂ ಇದರಲ್ಲಿ ಅನುಸೂಚಿಗಳನ್ನು ಸಹ ತಿಳಿಯದೆ, ರಾಜಕೀಯ ಶಕ್ತಿಗಳು ತಮ್ಮ ಸ್ವಹಿತ ಸಾಧನೆಗಾಗಿ, ದೇಶದ ಏಳಿಗೆಗಾಗಿ ಕಾರ್ಯೋನ್ಮುಖರಾಗದೆ, ತಮ್ಮ ತಮ್ಮ ವೈಯಕ್ತಿಕ ಸಾಧನೆ ಹಾಗೂ ಬೆಳವಣಿಗೆಗಾಗಿ ದೇಶವನ್ನು ಬಲಿಪಶು ಮಾಡುತ್ತಿದ್ದಾರೆ ಎಂದರು. ಇದನ್ನು ಹೋಗಲಾಡಿಸಲು ಪ್ರತಿಯೊಬ್ಬ ಪ್ರಜೆಯು ಸಂವಿಧಾನದ ಮೂಲಭೂತ ಹಕ್ಕು, ಕರ್ತವ್ಯ ಮತ್ತು ಅನುಸೂಚಿಗಳನ್ನು ಅರಿತು, ದೇಶದಲ್ಲಿ ಬದಲಾವಣೆ ತರಬೇಕಾಗಿದೆ, ಇದರ ಜವಾಬ್ದಾರಿ ನಿಮ್ಮಂತಹ ಯುವ ವಿದ್ಯಾರ್ಥಿ ಸಮೂಹ ಮೇಲಿದೆ ಎಂದು ಕರೆ ಕೊಟ್ಟು, ಗಣರಾಜ್ಯೋತ್ಸವದ ಶುಭಾಶಯಗಳನ್ನು ಹೇಳಿದರು.



ಎಸ್.ಬಿ.ಆರ್.ಆರ್. ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಭಾಗವತ್ ಅವರು ಮಾತನಾಡುತ್ತಾ, ಭಾರತದ ಸಂವಿಧಾನ ಪ್ರಪಂಚದಲ್ಲೇ ಶ್ರೇಷ್ಠ ಸಂವಿಧಾನದಲ್ಲಿ ಒಂದಾಗಿದೆ. 1950 ಜನವರಿ 26 ಭಾರತದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು, ಬ್ರಿಟಿಷರ ದಾಸ್ಯ ದಿಂದ ಮುಕ್ತಿ ಹೊಂದಿ, ತನ್ನದೇ ಆದ ಸಂವಿಧಾನವನ್ನು ರೂಪಿಸಿಕೊಂಡು ಜಾರಿ ಯಾದ ಐತಿಹಾಸಿಕ ಶುಭದಿನ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಇತರ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಮುಡಿಪಾತಿಟ್ಟ ಯೋಧರು, ಹುತಾತ್ಮರನ್ನು ನೆನೆಯುವ ದಿನ ಎಂದರು.

ಮುಂದುವರಿದು ಮಾತನಾಡುತ್ತಾ, ನಮ್ಮ ಪ್ರಜಾಪ್ರಭುತ್ವದ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಮತದಾನ ಮಾಡುವ ಪವಿತ್ರವಾದ ಹಕ್ಕು ಮತ್ತು ಕರ್ತವ್ಯ ನೀಡಿದೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ಆಯ್ಕೆ ಮಾಡಿದ್ದರೂ ಸಹ, ನಮ್ಮ ಸಂವಿಧಾನ ರಚನೆ, ನೀತಿ, ನಿಯಮ, ಹಕ್ಕು ಮತ್ತು ಕರ್ತವ್ಯಗಳನ್ನು ಅರಿತು, ಸುಭದ್ರ ಹಾಗೂ ದೇಶದ ಅಭಿವೃದ್ಧಿಗಾಗಿ ತಪ್ಪದೆ ಮತ ಚಲಾಯಿಸಿಬೇಕು. ನಮ್ಮ ದೇಶದ ಪರಿಸರ ಇಂದು ಅಧೋಗತಿಗೆ ಇಳಿಯುತ್ತಿದೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿ ಹಾಗೂ ಮೂಲಮಂತ್ರವಾಗಬೇಕು ಎಂದು ಹೇಳಿ, ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳನ್ನು ಹೇಳಿದರು.

ಇದೇ ಸಂಧರ್ಭದಲ್ಲಿ ಸ್ವಾತಂತ್ರ್ಯ ಸಂದರ್ಭದಲ್ಲಿ ಉಪಯೋಗಿಸಿದ ಹೌಟ್ಸ್‌ಜರ್ ಇ2 ಇಂಡಿಯನ್ ಮೌಂಟೇನ್ ಫಿರಂಗಿಯನ್ನು ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಗಣರಾಜ್ಯೋತ್ಸವ ದಿನದಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಅಧಿಕಾರಿಗಳು ಪ್ರದರ್ಶಿಸಿದರು ಹಾಗೂ ಅದನ್ನು ಈ ಫಿರಂಗಿ ಹೇಗೆ ಉಪಯೋಗಿಸಲ್ಪಟ್ಟಿತು ಎಂದು ಬಹಿರಂಗ ಪ್ರದರ್ಶನ ಮಾಡಲಾಯಿತು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ಪ್ರಾಧ್ಯಾಪಕರು ಹಾಗೂ ಎನ್.ಸಿ.ಸಿ. ಅಧಿಕಾರಿ ಲೆಫ್ಟಿನೆಂಟ್ ಎಂ.ಆರ್. ಇಂದ್ರಾಣಿ 1918–19ನೆಯ ಸಾಲಿನ ಡಿ.ಡಿ.ಜಿ. ಕಮಂಡೇಷನ್ ಪ್ರಶಸ್ತಿಗೆ ಪಾತ್ರರಾಗಿದ್ದರು. ಅವರಿಗೆ ಕಾಲೇಜಿನ ಆಡಳಿತ ಮಂಡಳಿ ಅವರನ್ನು ಗಣರಾಜ್ಯೋತ್ಸವ ದಿನದಂದು ಅಭಿನಂದಿಸಿ, ಗೌರವಿಸಲಾಯಿತು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ಬಿ.ಎ. ವಿದ್ಯಾರ್ಥಿ ಕು. ಸುಹಾಸ್ ನೇಪಾಳದಲ್ಲಿ ನಡೆದ 2019ರ ಅಂತರರಾಷ್ಟ್ರೀಯ ಓಪನ್ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡು ಬೆಳ್ಳಿ ಪದಕವನ್ನು ಪಡೆದು ಚಾಂಪಿಯನ್‌ಷಿಪ್‌ಗೆ ಭಾಜನರಾಗಿದ್ದಾರೆ ಹಾಗೂ ಇದೇ ವಿದ್ಯಾರ್ಥಿ 2019ರಲ್ಲಿ ಹರಿಯಾಣದಲ್ಲಿ ನಡೆದ ಸೀನಿಯರ್ ನ್ಯಾಷನಲ್ ಕಿಕ್

ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಪಡೆದು ರೂ. ಒಂದು ಲಕ್ಷ ನಗದು ಬಹುಮಾನ ಪಡೆದಿದ್ದಾರೆ ಅಲ್ಲದೆ ಕು. ಸುಹಾಸ್ 8 ಬಾರಿ ರಾಜ್ಯವನ್ನು ಓಪನ್ ಕಿಕ್ ಬಾಕ್ಸಿಂಗ್ ಸ್ಪರ್ಧೆಗಳಲ್ಲಿ ಪ್ರತಿನಿಧಿಸಿ 8 ಚಿನ್ನದ ಪದಕಗಳನ್ನು ಪಡೆದು, 'ಕರುನಾಡ ಭೂಷಣ ಪ್ರಶಸ್ತಿ', 'ಕರ್ನಾಟಕ ಕಿರೀಟ' ಮತ್ತು 'ಯುವ ಪ್ರತಿಭಾನ್ವಿತ ಆಟಗಾರ' ಎಂಬ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರನ್ನು ಕಾಲೇಜಿನ ಆಡಳಿತ ಮಂಡಳಿ ಗಣರಾಜ್ಯೋತ್ಸವ ದಿನದಂದು ಅಭಿನಂದಿಸಿ, ಗೌರವಿಸಲಾಯಿತು.

ಮಹಾಜನ ಕಾನೂನು ಕಾಲೇಜಿನ ಪ್ರಥಮ ಎಲ್‌ಎಲ್‌ಬಿ ವಿದ್ಯಾರ್ಥಿ ಕು. ಶ್ರೀಯಾಕಿರಣ್ ದೆಹಲಿಯಲ್ಲಿ ನಡೆದ ಏಷ್ಯನ್ ಕೆಟಲ್‌ಬೆಲ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ, ಚಿನ್ನದ ಪದಕವನ್ನು ಪಡೆದಿದ್ದಾರೆ, ಇವರನ್ನು ಇವರನ್ನು ಕಾಲೇಜಿನ ಆಡಳಿತ ಮಂಡಳಿ ಗಣರಾಜ್ಯೋತ್ಸವ ದಿನದಂದು ಅಭಿನಂದಿಸಿ, ಗೌರವಿಸಲಾಯಿತು.

ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್. ವೆಂಕಟರಾಮು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ, ಅಭಿನಂದಿಸಿ, ಪ್ರಸ್ತಾವಿಕ ನುಡಿಗಳನ್ನಾಡಿದರು. ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಡಾ. ಎಸ್.ಆರ್. ರಮೇಶ್, 13 ಕರ್ನಾಟಕ ಬ್ಯಾಟಲಿಯನ್ ಎನ್‌ಎಸ್‌ಎಸ್ ಅಧಿಕಾರಿಗಳಾದ ಸುಬೇದಾರ್ ಶ್ರೀ ರಣಜಿತ್‌ಸಿಂಗ್, ಹವಾಲ್ದಾರ್ ಗಳಾದ ಶ್ರೀ ಪಿ. ಮಹೇಶ್, ಶ್ರೀ ರಾಜೇಶ್ ಕುಮಾರ್, ಸುರೇಂಧ್ರ ಸಿಂಗ್, ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀಮತಿ ಬಿ. ಆರ್. ಜಯಕುಮಾರಿ, ಡಾ. ಎಸ್. ವೆಂಕಟರಾಮು, ಮಹಾಜನ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಾಜೇಶ್ವರಿ ಅಯ್ಯರ್, ಮಹಾಜನ ಪ್ರೌಢಶಾಲೆಯ ಉಪಪ್ರಾಂಶುಪಾಲರಾದ ಶ್ರೀಮತಿ ಹೇಮಾವತಿ, ಪದವಿ ಪೂರ್ವಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಸುಮನಾ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಲೇಜಿನ ಎನ್.ಸಿ.ಸಿ. ಅಧಿಕಾರಿ ಕಮಾಂಡರ್ ಕ್ಯಾಪ್ಟನ್ ನಿಖಿಲ್ ಬಿ. ಆರ್. ವಂದಿಸಿದರು. ಸಮಾರಂಭದಲ್ಲಿ ಕಾಲೇಜಿನ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಬೋಧಕ, ಮತ್ತು ಬೋಧಕೇತರ ವರ್ಗ, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್ ಕೆಡೆಟ್‌ಗಳು ಹಾಗೂ ಪದವಿ, ಪದವಿಪೂರ್ವ, ಹೈಸ್ಕೂಲ್, ಮಿಡಲ್ ಹಾಗೂ ಪ್ರೈಮರಿ ಸ್ಕೂಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಗಣ್ಯರು ಗಣರಾಜ್ಯೋತ್ಸವ ಸಮಾರಂಭದಲ್ಲಿ ಹಾಜರಾಗಿ, ದೇಶದ ತ್ರಿವರ್ಣ ಧ್ವಜಕ್ಕೆ ಗೌರವ ಸೂಚಿಸಿದರು. ಗಣರಾಜ್ಯೋತ್ಸವದ ಕಾರ್ಯಕ್ರಮದ ನಿಮಿತ್ತ ಎಲ್ಲರಿಗೂ ಸಿಹಿ ವಿತರಿಸಲಾಯಿತು.

**(ಎಸ್. ವೆಂಕಟರಾಮು)**
**ಪ್ರಾಂಶುಪಾಲರು**